ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
Government of Karnataka
Karnataka Residential Educational Institutions Society
(An Organisation of Govt. of Karnataka)

ನೇಮಕಾತಿ ಪ್ರಾಧಿಕಾರಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ನಂ.8, ಎಂ.ಎಸ್.ಬಿ-1, 6 ಮತ್ತು 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು.
ದೂರವಾಣಿ ಸಂಖ್ಯೆ: 080-22283366, 22204466, 22265755
ಇ-ಮೇಲ್: ed.kreis@ka.gov.in

ಸಂಖ್ಯೆ:ಕವಶಿಸಸ/ಆಡಳಿತ/ಹೋನೇ/ಓ.ಎಂ.ಆರ್/01/ಸಿ.ಆರ್-01/2016-17(2) ದಿನಾಂಕ: 06.09.2021

ಅಧಿಸೂಚನೆ

ವಿಷಯ: ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್/ ರಿಟ್ ಅಪೀಲುಗಳ ತೀರ್ಪುಗಳಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲದಿಂದ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ಪ್ರಾಂಶುಪಾಲರು/ಶಿಕ್ಷಕರುಗಳನ್ನು ಸೇವಾ ಕೃಪಾಂಕಕ್ಕೆ ಪರಿಗಣಿಸಿ, ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ:
1. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 20204-20364/2011 ಮತ್ತು ಇತರೆ ಸಂಯೋಜಿತ ಪ್ರಕರಣಗಳ ತೀರ್ಮಾನ ದಿ:13/07/2012.
2. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಮೇಲ್ಮನವಿ ಅರ್ಜಿ ಸಂಖ್ಯೆ: 5127/2012 ಮತ್ತು ಇತರೆ ಸಂಯೋಜಿತ ಪ್ರಕರಣಗಳ ತೀರ್ಮಾನ ದಿ:28.2.2013 ಮತ್ತು ರಿಟ್ ಅರ್ಜಿ ಸಂಖ್ಯೆ: 958-988/2015, ದಿ: 12/02/2015
3. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ, ಧಾರವಾಡ ಪೀಠದ ಮೇಲ್ಮನವಿ ಅರ್ಜಿ ಸಂಖ್ಯೆ: 31346/2012 ಮತ್ತು ಇತರ ಸಂಯೋಜಿತ ಪ್ರಕರಣಗಳ ತೀರ್ಮಾನ ದಿ: 21/03/2013.
4. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 113076/2014 ಮತ್ತು ಸಂಯೋಜಿತ ರಿಟ್ ಅರ್ಜಿಗಳಾದ 100572/2015 ಮತ್ತು 100573-582/2015, ದಿ: 21/01/2015.
5. ಸರ್ಕಾರದ ಪತ್ರ ಸಂಖ್ಯೆ: ಸಕಇ 194 ಮೊದೇಶಾ 2016 ದಿನಾಂಕ: 20.07.2021
6. ತಾತ್ಕಾಲಿಕ ಆಯ್ಕೆ ಪಟ್ಟಿ ಸಂಖ್ಯೆ:ಕವಶಿಸಸ/ಆಡಳಿತ/ಹೋನೇ/ಓ.ಎಂ.ಆರ್/01/ಸಿ.ಆರ್-01/2016-17(2) ದಿನಾಂಕ: 06.08.2021

******

ಉಲ್ಲೇಖ (1) ರಿಂದ (4)ರ ವರೆಗಿನ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಗಳ ತೀರ್ಪುಗಳನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇದರ ಅಧೀನದಲ್ಲಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲ ಏಜೆನ್ಸಿ ವತಿಯಿಂದ/ ಜಿಲ್ಲಾ ಪಂಚಾಯಿತಿಯಿಂದ ತಾತ್ಕಾಲಿಕವಾಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ಪ್ರಾಂಶುಪಾಲರು ಮತ್ತು ಸಹ ಶಿಕ್ಷಕರುಗಳಿಗೆ ಸೇವಾ ಕೃಪಾಂಕ ನೀಡಲು ನಿಬಂಧನೆಗಳನುಸಾರ ಮೂಲ ದಾಖಲಾತಿಗಳ ಪರಿಶೀಲನೆ ನಡೆಸಲಾಗಿರುತ್ತದೆ.

ಉಲ್ಲೇಖ (5)ರಲ್ಲಿ ವಿವಿಧ ತಾಂತ್ರಿಕ ಕಾರಣಗಳಿಂದ ಆಯ್ಕೆಯಾಗದೇ ಉಳಿದಿದ್ದ 10 ಹೊರಸಂಪನ್ಮೂಲ ಬೋಧಕ ಸಿಬ್ಬಂದಿಗಳಿಗೆ ಸೇವಾ ಕೃಪಾಂಕ ನೀಡಿ ನೇಮಕಾತಿ ನೀಡಲು ಸರ್ಕಾರ ಅನುಮೋದನೆ ನೀಡಿರುತ್ತದೆ.

ಮುಂದುವರೆದು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಉಲ್ಲೇಖ(6)ರಲ್ಲಿ ಪ್ರಕಟಿಸಿ, 07 ದಿನಗಳೊಳಗಾಗಿ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿತ್ತು. ನಂತರ ಬಂದ ಆಕ್ಷೇಪಣೆಗಳನ್ನು ಪರಿಶೀಲಿಸಿದ್ದು, ಈ ಕೆಳಗೆ ತಿಳಿಸಿರುವ ನಿಬಂಧನೆಗಳಿಗೊಳಪಟ್ಟು ಈ ಕೆಳಕಂಡ 10 ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ.

ಕ್ರ ಸಂ	ಅಭ್ಯರ್ಥಿಯ ಹೆಸರು	ಹುದ್ದೆ	ನೊಂದಣಿ ಸಂಖ್ಯೆ	ವರ್ಗ	ಸಿ.ಸಿ.ಇ ಅಂಕ	ಸೇವಾ ಕೃಪಾಂಕಕ್ಕೆ ಪರಿಗಣಿಸಿದ ವರ್ಷಗಳು	ಪರಿಗಣಿಸಿದ ಸೇವಾ ಕೃಪಾಂಕ	ಒಟ್ಟು ಅಂಕಗಳು	ವರ್ಗವಾರು ಕಟ್ ಆಫ್ ಅಂಕಗಳು
1	2	3	4	5	6	7	8	9	10
1	ತ್ರಿವೇಣಿ ಎನ್	ಹಿಂದಿ ಭಾಷಾ ಸಹ ಶಿಕ್ಷಕರು	118487	ಸಿ-1/ಮಹಿಳೆ	58.01	1	5	63.01	59.05
2	ಮೀನಾಕ್ಷಿ .ಜಿ	ಹಿಂದಿ ಭಾಷಾ ಸಹಶಿಕ್ಷಕರು	138793	2ಎ/ಮಹಿಳೆ	52.43	2	10	62.43	58.99
3	ಬೇಬಿ ಬಿ.ಜಿ	ಕನ್ನಡ ಭಾಷಾ ಸಹಶಿಕ್ಷಕರು	244697	3ಎ/ಮಹಿಳೆ	56.54	3	15	71.54	69.78
4	ಬಸವ್ವ ನರೇಗಲ್	ಕನ್ನಡ ಭಾಷಾ ಸಹಶಿಕ್ಷಕರು	174166	ಸಾಮಾನ್ಯ/ ಎಲ್.ಸಿ	50.98	2	10	60.98	57.008
5	ಮಹೇಶ ಕೆ.ಆರ್	ಹಿಂದಿ ಭಾಷಾ ಸಹಶಿಕ್ಷಕರು	137559	ಸಿ-1	53.94	2	10	63.94	59.97
6	ಖಯ್ಯುಮ್ ಎಸ್.ಎ	ಹಿಂದಿ ಭಾಷಾ ಸಹಶಿಕ್ಷಕರು	227885	2ಬಿ	52.57	2	10	62.57	61.39
7	ಮಲ್ಲನ ಗೌಡರ ನಾಗರಾಜ	ಸಮಾಜ ವಿಜ್ಞಾನ ಸಹಶಿಕ್ಷಕರು	121829	ಸಿ-1	51.53	1	5	56.53	54.56
8	ಲಕ್ಷ್ಮಣ ಪಾಂಡಪ್ಪ ತಿಪ್ಪಿಮನಿ	ಗಣಿತ ಸಹಶಿಕ್ಷಕರು	183585	3ಬಿ	52.77	3	15	67.77	63.45
9	ರವಿಕುಮಾರ ಪಾಟೀಲ ಬಿ.ಎಂ.ಎಲ್	ಗಣಿತ ಸಹಶಿಕ್ಷಕರು	125035	ಸಾಮಾನ್ಯ	56.79	2	10	66.79	64.09
10	ಚಿದಾನಂದ ಆದಿಗೊಂಡೆ ಮಲ್ಲಪ್ಪ	ಗಣಿತ ಸಹಶಿಕ್ಷಕರು	102401	3ಬಿ	53.22	3	15	68.22	63.45

ನಿಬಂಧನೆಗಳು:-

1. ಈ ಆಯ್ಕೆಪಟ್ಟಿಯು ಭವಿಷ್ಯದಲ್ಲಿ ಬರಬಹುದಾದ ಮಾನ್ಯ ಉಚ್ಚ ನ್ಯಾಯಾಲಯಗಳ ತೀರ್ಪುಗಳು ಹಾಗೂ ಸರ್ಕಾರದ ತೀರ್ಮಾನಗಳಿಗೊಳಪಟ್ಟಿರುತ್ತದೆ.
2. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳು, ಯೋಜನಾ ನಿರಾಶ್ರಿತರು, ಅಂಗವಿಕಲರು, ಕನ್ನಡ ಮಾಧ್ಯಮ, ಗ್ರಾಮೀಣ ಪ್ರದೇಶದ ಅಭ್ಯರ್ಥಿ, ಮಾಜಿ ಸೈನಿಕ ಮುಂತಾದ ಮೀಸಲಾತಿಯ ಪರಿಗಣನೆಗೆ

ಅಭ್ಯರ್ಥಿಯು ಸಲ್ಲಿಸಿರುವ ಪ್ರಮಾಣ ಪತ್ರಗಳು ಸಂಬಂಧಪಟ್ಟ ಜಿಲ್ಲಾ ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರದಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದನಂತರ ಅಂಗೀಕರಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

3. ಈ ಪಟ್ಟಿಯಲ್ಲಿನ ಅಭ್ಯರ್ಥಿಗಳ ನಡತೆ ಹಾಗೂ ಪೂರ್ವಚರಿತ್ರೆಗೆ (Character and Antecedents) ಸಂಬಂಧಿಸಿದಂತೆ Police Verification ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.
4. ಈ ಪಟ್ಟಿಯಲ್ಲಿನ ಅಭ್ಯರ್ಥಿಗಳ ಶೈಕ್ಷಣಿಕ ಮೂಲ ದಾಖಲಾತಿಗಳ ನೈಜತೆ ಪರಿಶೀಲನೆ ಸಮಯದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯು ತಂತಾನೇ ರದ್ದುಗೊಳ್ಳುವುದಲ್ಲದೇ, ಅಂತಹ ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು.
5. ಸೇವಾ ಕೃಪಾಂಕ ಪರಿಗಣನೆಗಾಗಿ ಅಭ್ಯರ್ಥಿಗಳು ತಾವು ಸಲ್ಲಿಸಿರುವ ನೇಮಕಾತಿ ಆದೇಶ, ಹಾಜರಾತಿ ವಹಿ, ವೇತನ ಬಟವಾಡೆ ವಿವರಗಳು, ವಯೋಮಾನಕ್ಕೆ ಸಂಬಂಧಿಸಿದ ದಾಖಲೆಗಳು ಹಾಗೂ ಇನ್ನಿತರ ಸೇವಾ ದಾಖಲಾತಿಗಳು ಭವಿಷ್ಯದಲ್ಲಿ ನೈಜವಲ್ಲವೆಂದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯು ತಂತಾನೇ ರದ್ದುಗೊಳ್ಳುವುದಲ್ಲದೇ, ಅಂತಹ ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು ಹಾಗೂ ಪಾವತಿಸಿದ ವೇತನವನ್ನು ವಸೂಲು ಮಾಡಲಾಗುವುದು.
6. ಈ ಆಯ್ಕೆಪಟ್ಟಿಯಲ್ಲಿರುವ ಅಭ್ಯರ್ಥಿಗಳು ವೈದ್ಯಕೀಯ ದೇಹದಾರ್ಢ್ಯತೆ ಪ್ರಮಾಣ ಪತ್ರವನ್ನು ಜಿಲ್ಲಾ ವೈದ್ಯಾಧಿಕಾರಿ/ಜಿಲ್ಲಾ ಸರ್ಜನ್ ಶ್ರೇಣಿಯ ಅಧಿಕಾರಿಗಳಿಂದ ಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ.

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,
ಬೆಂಗಳೂರು.